ಶ್ರೀ ಎನ್ ಧರ್ಮಸಿಂಗ್ – ಸಂವಿಧಾನದ ಮುಖ್ಯಸ್ಥರು ಸರ್ಕಾರಕ್ಕೆ ಇವತ್ತು ಪತ್ರ ಬರೆದಿದ್ದಾರೆ ಸರ್ಕಾರಕ್ಕೆ ಛೀಮಾರಿ ಹಾಕಿದ್ದಾರೆ ಸರ್ಕಾರ ಇವತ್ತು ರಾಜ್ಯಪಾಲರ ಬಗ್ಗೆ ಗೌರವವಿಲ್ಲದಂಥ ಸರ್ಕಾರ ಇವತ್ತಿನ ದಿವಸ ಒಂದು ಸ್ಪಷ್ಟವಾದಂಥ ನಿಲುವು ತೆಗೆದುಕೊಳ್ಳಲಾರದಂಥ ಸರ್ಕಾರಕ್ಕೆ ಧಿಕ್ಕರಿಸಿ ನಾವು ಸಭಾತ್ಯಾಗ ಮಾಡುತ್ತೇವೆ

(ಈ ಹಂತದಲ್ಲಿ ಪ್ರತಿಪಕ್ಷದ ನಾಯಕರು ಹಾಗು ಕಾಂಗ್ರೆಸ್ ಪಕ್ಷದ ಸದಸ್ಯರು ಸದನದಿಂದ ಹೊರ ನಡೆದರು)

(ಗೊಂದಲ)

ಅಧ್ಯಕ್ಷರು – ಈಗ ಮಾನ್ಯ ಹಂಪನಗೌಡರೇ ಮಾತನಾಡಿ ಮಾನ್ಯ ವಾಟಾಳ್ ನಾಗರಾಜ್ ಇದ್ದಾರೆಯೇ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ – ಅಧ್ಯಕ್ಷರೇ, ಕಾವೇರಿ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ

(ಗೊಂದಲ)

ಅಧ್ಯಕ್ಷರು.– ಸದಸ್ಯರು ಸುಮ್ಮನೆ ಇರಿ, ಅವರೇನೋ ವಿಚಾರವನ್ನು ಹೇಳುತ್ತಿದ್ದಾರೆ

4 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ
ವಿಷಯ ಕಾವೇರಿ ನ್ಯಾಯ ಮಂಡಳಿ ತೀರ್ಪಿನ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಅಧ್ಯಕ್ಷರೇ, ಕಾವೇರಿ ನ್ಯಾಯಮಂಡಳಿ ತೀರ್ಪು ದಿನಾಂಕ 5 2 2007 ರಂದು ಬಂತು 21ನೇ ತಾರೀಖು ಆದರೂ ಈ ಸದನದಲ್ಲಿ ಈ ಕಾವೇರಿಯ ಬಗ್ಗೆ ಒಂದು ನಿರ್ಣಯ ಆಗಿಲ್ಲ ಇಡೀ ರಾಜ್ಯದ ಜನ ಕಣ್ಣಿನ ಮೇಲೆ ಕಣ್ಣಿಟ್ಟು ನೋಡುತ್ತಿದ್ದಾರೆ ಸದನ ನಡೆಯುತ್ತಿದೆ ಹೀಗೆ ಈ ಸದನ ನಡೆಯುವಾಗ ನಾವು ಅನೇಕ ಸಾರಿ ಸದನ ನಡೆಯದಿದ್ದಾಗ ಇಂಥ ಪ್ರಶ್ನೆ ಬಂದಾಗ ತುರ್ತು ಸದನ ಕರೆಯಿರಿ ಎಂದು ಹೇಳುತ್ತೇವೆ ತುರ್ತು ಸದನವನ್ನು ಕರೆದು ತೀರ್ಮಾನ ಮಾಡಬೇಕೆಂದು ಹೇಳುತ್ತೇವೆ ಇದು ಸುಮಾರು 5ನೇ ತಾರೀಖು ತೀರ್ಪು ಬಂತು, ಇವತ್ತು 21ನೇ ತಾರೀಖು ಆಯಿತು, ಇದರ ಬಗ್ಗೆ ಸರ್ಕಾರ ಇನ್ನೂ ಏನೂ ತೀರ್ಮಾನ ಎಂದು ಹೇಳಿ ಇನ್ನು ನಿರ್ಣಯ ಆಗಿಲ್ಲ ನಿನ್ನೆ ಸರ್ವಪಕ್ಷಗಳ ಸಭೆಯನ್ನು ತಮಿಳುನಾಡಿನಲ್ಲಿ ಕರೆದು ತಕ್ಷಣ ತೀರ್ಮಾನವನ್ನು ತೆಗೆದುಕೊಂಡು ಪುನರ್‌ಪರಿಶೀಲನಾ ಅರ್ಜಿಯನ್ನು ಸಲ್ಲಿಸಬೇಕೆಂದು ತೀರ್ಮಾನ

ತೆಗೆದುಕೊಂಡಿದ್ದಾರೆ ನಮ್ಮ ಸದನದಲ್ಲಿ ಇಡೀ ರಾಜ್ಯದ ಜನತೆ ಸಂಪೂರ್ಣವಾಗಿ ಸರ್ಕಾರಕ್ಕೆ ನೀವು ನಿರ್ಧಾರ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ ಈ ಕಾವೇರಿಯ ಬಗ್ಗೆ ನಾವೇನೂ ನಿರ್ಧಾರ ತೆಗೆದುಕೊಳ್ಳದಿದ್ದರೆ ಇವತ್ತು ಸದನವನ್ನು ಮುಂದೂಡುತ್ತೇವೆಂದು ಆಗಲೇ ಅಪ್ಪಣೆ ನಿಮ್ಮ ಬಾಯಿಂದ ಬಂತು ನನಗನ್ನಿಸುತ್ತದೆ, ಇನ್ನು ಒಂದು ವಾರ ಸದನವನ್ನು ಮುಂದೂಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ, ಆದರೆ ನೀವು ಇವತ್ತು ಸದನವನ್ನು ಮುಂದೂಡುವುದಾದರೆ ನೀವು ಇದುವರೆಗೂ ಕಾವೇರಿ ತೀರ್ಪಿನ ಬಗ್ಗೆ ನಿರ್ಣಯ ಮಾಡಿಲ್ಲ ಈಗಲಾದರೂ ಏನು ನಿರ್ಣಯ ಮಾಡುತ್ತೀರಿ? ಮಾನ್ಯ ಸಂಸದೀಯ ಸಚಿವರು ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಇದರ ಬಗ್ಗೆ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು ಕಾವೇರಿಯ ಬಗ್ಗೆ ನೀವು ತೀರ್ಮಾನ ತೆಗೆದುಕೊಳ್ಳದಿದ್ದರೆ ಈ ರಾಜ್ಯದ ಜನತೆಗೆ ಬಹಳ ದ್ರೋಹ ಮಾಡಿದಂತಾಗುತ್ತದೆ ಈ ರಾಜ್ಯದ ಜನತೆ ನಿಮನ್ನು ಕಣ್ಣಿಟ್ಟು ನೋಡಿದಂತಾಗುತ್ತದೆ ದಯವಿಟ್ಟು ಕಳಕಳಿಯಿಂದ ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ ನಿರ್ಣಯ ಆಗಲೇಬೇಕು ಕಾವೇರಿ ನಿರ್ಣಯ ಇಲ್ಲಿ ಆಗಲೇ ಬೇಕು ಅದಕ್ಕೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ, ಅದು ನಿರ್ಣಯವಾಗಲೇಬೇಕು ನಿರ್ಣಯವಾಗದೇ ಏನು ಸಾಧ್ಯವೇ ಇಲ್ಲ ನಾಳೆ ನೀವೇ ಎಲ್ಲೇ ಸರ್ವ ಪಕ್ಷಗಳ ಸಭೆ ಕರೆದರೂ ನಾನಂತೂ ಆ ಸಭೆಗೆ ಹೋಗುವುದಿಲ್ಲ, ಬಹಿಷ್ಕಾರ ಹಾಕುತ್ತೇನೆ ಈ ಸದನ, ಈ ಸಭೆ ಬಹಳ ಪ್ರಾಮುಖ್ಯತೆ ಹೊಂದಿದೆ, ಸರ್ವ ಪಕ್ಷಗಳ ಸಭೆಗಿಂತ, ಲೋಕಸಭಾ ಸದಸ್ಯರಿಗಿಂತ, ಸಂವಿಧಾನಬದ್ಧವಾಗಿ ಈ ರಾಜ್ಯದ ಪ್ರಾತಿನಿಧಿಕವಾದಂತಹ ಸಭೆ ಈ ಸಭೆಯಲ್ಲಿ ಆ ನಿರ್ಣಯ ಆಗಲಿಲ್ಲವೆಂದು ಹೇಳಿದರೆ ಅದರಿಂದ ನಿಜಕ್ಕೂ ನಮಗೆ ನೋವುಂಟಾಗುತ್ತದೆ, ತಪ್ಪು ಮಾಡಿದಂತಾಗುತ್ತದೆ ಈಗ ಅವರು ಹೇಳಬೇಕು ಇವತ್ತೇ ನಾವು ನಿರ್ಣಯ ಮಂಡಿಸುತ್ತೇವೆಂದು ಅವರು ಹೇಳಲಿ, ನನ್ನದೇನೂ ಅಭ್ಯಂತರವಿಲ್ಲ, ಇವತ್ತು ನಿಧಾನವಾದರೂ ಚಿಂತೆಯಿಲ್ಲ, ಅವರು ಹೇಳಲಿ

ಅಧ್ಯಕ್ಷರು – ನಿಮ್ಮ ವಿರೋಧಪಕ್ಷಗಳ ಎಲ್ಲಾ ನಾಯಕರ ಸಭೆಯನ್ನು ನಾಳೆ ದಿವಸ ಕರೆದಿದ್ದಾರಲ್ಲಾ ಮಾನ್ಯ ನಾಗರಾಜ್‌ರವರೇ

ಶ್ರೀ ವಾಟಾಳ್ ನಾಗರಾಜ್ – ಸರ್ ಈ ಸಭೆ ಇವತ್ತು ಕೊನೆಯಾಗುತ್ತದೆಂದು ಹೇಳಿದಿರಿ

ಅಧ್ಯಕ್ಷರು – ಹೌದು

ಶ್ರೀ ವಾಟಾಳ್ ನಾಗರಾಜ್ – ಆದ್ದರಿಂದ ಈ ನಿರ್ಣಯವನ್ನು ಅವರು ಮಂಡಿಸುತ್ತಾರೆಯೇ ಇಲ್ಲವೇ, ಅಷ್ಟೇ ನನಗೆ ಬೇಕಾಗಿರುವುದು ಕಾವೇರಿ ನಿರ್ಣಯವನ್ನು ಇದುವರೆಗೆ ಮಂಡಿಸದಿರುವುದಕ್ಕೆ ಕಾರಣವೇನು? ಹಾಗಾದರೆ ನೀವು ಕಾವೇರಿ ನ್ಯಾಯಮಂಡಳಿಯ ತೀರ್ಪನ್ನು ಒಪ್ಪಿಕೊಳ್ಳುವಿರಾ?

ಅಧ್ಯಕ್ಷರು – ನೀರಾವರಿ ಸಚಿವರು ಉತ್ತರಿಸಲಿಕ್ಕೆ ನಿಂತಿದ್ದಾರೆ

(ಗೊಂದಲ)

ಶ್ರೀ ಹೆಚ್ ಆಂಜನೇಯ – ಕಾಂಗ್ರೆಸ್ಸಿನವರು ಅಧಿಕಾರದ ಲಾಲಸೆಗೋಸ್ಕರ ಹೋರಾಟ ಮಾಡಿಕೊಂಡು ರಾಜ್ಯಪಾಲರಿಂದ ಒಂದು ಶಿಫಾರಸ್ಸು ಪತ್ರ ತಂದುಬಿಟ್ಟು ಭಾರೀ ನಾವು ಗೆದ್ದುಬಿಟ್ಟೆವು ಎಂದು ಹೇಳುತ್ತಿದ್ದಾರೆ ರಾಜ್ಯ ಹತ್ತಿ ಉರಿಯುತ್ತಿದೆ 15 ದಿವಸಗಳಿಂದ ಕಾರ್ಯಕಲಾಪಗಳು ನಡೆಯಲಿಕ್ಕೆ ಬಿಟ್ಟಿಲ್ಲ ನಮ್ಮ ಎಲ್ಲಾ ಹಕ್ಕುಗಳಿಗೆ ಇವತ್ತಿನ ದಿವಸ ಚ್ಯುತಿ ತರತಕ್ಕಂಥ ಕೆಲಸವನ್ನು ಕಾಂಗ್ರೆಸ್‌ನವರು ಇಲ್ಲಿ ಮಾಡಿದ್ದಾರೆ ಆದ್ದರಿಂದ ದಯಮಾಡಿ ತಾವು ಇವತ್ತು ಕಾವೇರಿಯ ಮಧ್ಯಂತರ ತೀರ್ಪು ಏನು ಬಂದಿದೆ ಆ ತೀರ್ಪಿನ ವಿರುದ್ಧ ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು

(ಗೊಂದಲ)

ಅಧ್ಯಕ್ಷರು – ಈಗ ಮಾನ್ಯ ಈಶ್ವರಪ್ಪನವರು ಉತ್ತರ ಕೊಡುತ್ತಾರೆ, ಕೇಳಿ

(ಗೊಂದಲ)

ಶ್ರೀ ಹೆಚ್ ಆಂಜನೇಯ – ರಾಜ್ಯದಲ್ಲಿ ಹತ್ತಿ ಉರಿಯುತ್ತಿದೆ ಕಾವೇರಿ ಬಗ್ಗೆ ಚರ್ಚೆ ಮಾಡಲಿಕ್ಕೆ ತಾವುಗಳು ಸಿದ್ಧರಿಲ್ಲ ರಾಜ್ಯದಲ್ಲಿ ಬಂದ್ ಆಯಿತು, ಬೆಂಗಳೂರು ಜನಕ್ಕೆ ನೀರು ಸಿಗುತ್ತದೆಯೆ ಎಂಬ ಬಗ್ಗೆಯೇ ಗ್ಯಾರಂಟಿ ಇಲ್ಲ ಇಷ್ಟೊಂದು ಸಮಸ್ಯೆ ಇರುವಾಗ ನೀವು ಸಮಸ್ಯೆ ಬಗ್ಗೆ ಮಾತನಾಡುವುದನ್ನು ಬಿಟ್ಟು ಸ್ಪೀಕರ್ ಸ್ಥಾನಕ್ಕೋಸ್ಕರ ನೀವು ಹೋರಾಟ ಮಾಡಿದಿರಿ ಅಂದರೆ ಏನು ಅಧಿಕಾರದ ಲಾಲಸೆಗೋಸ್ಕರ ನೀವು ಹೋರಾಟ ಮಾಡುತ್ತಿದ್ದೀರಿ ಜನಪರವಾದ ಚಳವಳಿ ಮಾಡಲಿಕ್ಕೆ ಕಾಳಜಿ ನಿಮಗಿಲ್ಲ

ಶ್ರೀ ಹಂಪನಗೌಡ ಬಾದರ್ಲಿ – ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.– ಕುಳಿತುಕೊಳ್ಳಿ, ಅವರು ಎತ್ತಿದ ವಿಷಯಕ್ಕೆ ಮಾನ್ಯ ಈಶ್ವರಪ್ಪನವರು ಉತ್ತರ ಕೊಡುತ್ತಿದ್ದಾರೆ

(ಗೊಂದಲ)

ಶ್ರೀ ಹಂಪನಗೌಡ ಬಾದರ್ಲಿ – ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಕುಡಿಯಲಿಕ್ಕೆ ನೀರಿಲ್ಲ, ನಾನು ಮಾತನಾಡುವುದು ಬಹಳ ಅವಶ್ಯಕತೆಯಿದೆ

ಅಧ್ಯಕ್ಷರು – ಅವಶ್ಯಕತೆಯಿದೆ, ಆದರೆ ನಾನು ನಿಮ್ಮನ್ನು ಕರೆಯುತ್ತಿದ್ದರೂ ತಾವು ಎದ್ದು ಹೊರಟು ಹೋದಿರಲ್ಲಾ, ನಾನೇನು ಮಾಡಲಿಕ್ಕಾಗುತ್ತದೆ, ನಿಮಗೆ ಇಷ್ಟ ಬಂದ ಹಾಗೆ ನಾನು ನಿಮ್ಮನ್ನು ಕರೆಯಲಿಕ್ಕಾಗುತ್ತದೆಯೇ? ಹಂಪನಗೌಡರೇ ಮಾತನಾಡಿ ಎಂದು ಕರೆದರೂ ಎದ್ದು ಹೊರಗೆ ಹೋದಿರಿ, ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ ಈಗ ನೀರಾವರಿ ಸಚಿವರು ಉತ್ತರ ಕೊಡಲಿ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ :– ಜನಗಳಿಗೆ ಕುಡಿಯಲಿಕ್ಕೆ ನೀರಿಲ್ಲ

(ಗೊಂದಲ)

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ, ಅವರು ಎತ್ತಿರುವ ವಿಚಾರಕ್ಕೆ ಈಶ್ವರಪ್ಪನವರು ಉತ್ತರಿಸಲಿ ನಿಮಗೆ next ಅವಕಾಶ ಕೊಡುತ್ತೇನೆ

(ಗೊಂದಲ)

ದಯಮಾಡಿ ಕುಳಿತುಕೊಳ್ಳಿ ಮಾನ್ಯ ಸದಸ್ಯರುಗಳು ದಯಮಾಡಿ ಸ್ವಲ್ಪ ನಿಶ್ಯಬ್ಧತೆಯಿಂದ ಇರಬೇಕು

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):– ಕಾವೇರಿ ಮಧ್ಯಂತರ ತೀರ್ಪು ಬಂದ ನಂತರ ಈಗಾಗಲೇ ಸರ್ವ ಪಕ್ಷಗಳ ಸಭೆಯನ್ನು ಬೆಂಗಳೂರಿನಲ್ಲಿ ಕರೆದಾಗಿದೆ ಆ ಸಭೆಯಲ್ಲಿ ನೀರಾವರಿ ಮತ್ತು ಕಾನೂನು ತಜ್ಞರು ಎಲ್ಲಾ ಪಕ್ಷದ ನಾಯಕರುಗಳು, ಸನ್ಮಾನ್ಯ ವಾಟಾಳ್ ನಾಗರಾಜ್ ಆದಿಯಾಗಿ ಸರ್ವರೂ ಬಂದು ಸಭೆಯಲ್ಲಿ ಚರ್ಚೆ ಮಾಡಿಕೊಂಡು ಅಂದು ನಾವೆಲ್ಲರೂ ಒಂದು ತೀರ್ಮಾನಕ್ಕೆ ಬಂದಿರುವ ಪ್ರಕಾರ, ಇವತ್ತೇನು ಆ ತೀರ್ಪಿದೆ, ಆ ತೀರ್ಪನ್ನು ಸಂಪೂರ್ಣವಾಗಿ ನಾವೆಲ್ಲರೂ ಓದಬೇಕಾಗಿದೆ ಅದಕ್ಕೋಸ್ಕರ ಸ್ವಲ್ಪ ಸಮಯ ಬೇಕೆಂದಾಗ 2500 ಪ್ರತಿಗಳನ್ನು ಮಾಡಿ ನೀರಾವರಿ ತಜ್ಞರಿಗೆ, ಕಾನೂನು ತಜ್ಞರಿಗೆ ಎಲ್ಲಾ ಪಕ್ಷದ ಪ್ರಮುಖರಿಗೆ, ಹೋರಾಟಗಾರರಿಗೆ ಆ ಕಾಪಿಗಳನ್ನು ತಲುಪಿಸಲಾಗಿದೆ ನಾಳೆ ದಿವಸ ಸಂಜೆ ದೆಹಲಿಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಎಲ್ಲಾ ಸಂಸತ್ ಸದಸ್ಯರ ಒಂದು ಸಭೆಯನ್ನು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಭೆಯನ್ನು ಕರೆದಿದ್ದೇವೆ ನಾಳೆ ಸಂಜೆ 7 00 ಗಂಟೆಗೆ ಎಲ್ಲಾ ಸಂಸತ್ ಸದಸ್ಯರ ಅಭಿಪ್ರಾಯವನ್ನು ಪಡೆದುಕೊಂಡು ದಿನಾಂಕ 24 2 2007 ರಂದು ಬೆಳಿಗ್ಗೆ 11 00 ಗಂಟೆಗೆ

ಬೆಂಗಳೂರಿನಲ್ಲಿ ಒಂದು ಸರ್ವಪಕ್ಷಗಳ ಸಭೆ ಸೇರಲಿದ್ದೇವೆ ಹಿಂದಿನ ಸಬೆಯಲ್ಲಿ ಕಾನೂನು ತಜ್ಞರು, ನೀರಾವರಿ ತಜ್ಞರು ಯಾರ್ಯಾರು ಭಾಗವಹಿಸಿದ್ದರೋ ಅವರೆಲ್ಲರ ಅಭಿಪ್ರಾಯವನ್ನು ಪುನ ಪಡೆದುಕೊಂಡು ಇಡೀ ಸಭೆಯಲ್ಲಿ ಯಾವ ಅಭಿಪ್ರಾಯ ಬರುತ್ತದೋ ಅದಕ್ಕೆ ಸರ್ಕಾರ ಬದ್ಧವಾಗಿರುತ್ತದೆ ಇದರಲ್ಲಿ ಯಾವುದೇ ವ್ಯತ್ಯಾಸವಿಲ್ಲ ಕಾವೇರಿ ವಿಚಾರದಲ್ಲಿ ಯಾವುದೇ ಒಂದು ಪಕ್ಷ, ಜನ, ಹೋರಾಟಗಾರರನ್ನು, ತಜ್ಞರನ್ನು ಬಿಟ್ಟು ತೀರ್ಮಾನಿಸುವುದಲ್ಲ ಕರ್ನಾಟಕ ರಾಜ್ಯದ ಜನತೆಯ ಅಭಿಪ್ರಾಯಕ್ಕೆ ತಕ್ಕಂತೆ ಸ್ಪಂದಿಸಲಿಕ್ಕೆ ಈ ಸರ್ಕಾರ ಇದೆ

ಅವರೆಲ್ಲರ ಅಭಿಪ್ರಾಯ ಪಡೆದು ಅಲ್ಲಿ ಮೂಡುವ ಅಭಿಪ್ರಾಯಕ್ಕೆ ಸರ್ಕಾರ ಬದ್ಧವಾಗಿರುತ್ತದೆ, ಇದರಲ್ಲಿ ಯಾವ ವ್ಯತ್ಯಾಸವೂ ಇಲ್ಲ ಯಾಕೆಂದರೆ ಕಾವೇರಿ ವಿಚಾರದಲ್ಲಿ ಜನರನ್ನು ಬಿಟ್ಟು ಸರ್ಕಾರ ಮಾಡುವುದಿಲ್ಲ ಜನರ ಅಭಿಪ್ರಾಯಕ್ಕೆ ಸ್ಪಂದನ ಮಾಡುವಂತಹದು ಈ ಸರ್ಕಾರ 24ನೇ ತಾರೀಖು ಮಾನ್ಯ ವಾಟಾಳ್ ನಾಗರಾಜ್‌ರೂ ಬರಬೇಕೆಂದು ಮನವಿ ಮಾಡುತ್ತೇನೆ ಇಡೀ ರಾಜ್ಯದ ಅಭಿಪ್ರಾಯವೇ ತಮ್ಮದೂ ಹೌದು ಅಲ್ಲಿ ಈ ಸದನದಲ್ಲಿ ಒಂದು ನಿರ್ಣಯ ಮಂಡನೆ ಮಾಡಬೇಕು ಅಂತ ಅಭಿಪ್ರಾಯ ಬಂದರೆ ನಿರ್ಣಯವನ್ನೂ ಮಂಡಿಸುತ್ತೇವೆ ಅಥವಾ review petition ಹಾಕಬೇಕು, ಪ್ರಧಾನಮಂತ್ರಿಗಳ ಬಳಿಗೆ ಹೋಗಬೇಕು ಅಂತ ಏನೆಲ್ಲ ತೀರ್ಮಾನವಾಗುತ್ತದೋ ಅದಕ್ಕೆ ಸರ್ಕಾರ ಬದ್ಧವಾಗಿರುತ್ತದೆ

ಶ್ರೀ ವಾಟಾಳ್ ನಾಗರಾಜ್ ಈ ಸಭೆಯಲ್ಲಿ ನಡೆಯುವ ಕಾರ್ಯಕಲಾಪಗಳನ್ನು ಸರ್ವ ಪಕ್ಷ ಸಭೆ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ ಸಂಸತ್ಸದಸ್ಯರ ಸಭೆಯಲ್ಲೂ ಅಲ್ಲ ಈ ಸದನ ಅವರೆಲ್ಲರಿಗಿಂತ ಸರ್ವೋಚ್ಚ ಹಿಂದಿನ ಸಭೆಯ ತೀರ್ಮಾನದಂತೆ ವರದಿಯನ್ನು ಒದಗಿಸಿದ್ದೀರಿ, ಓದಿರುವವರು ಇದ್ದಾರೆ, ಸದನದಲ್ಲಿ ಚರ್ಚೆ ಮಾಡದೆ ಸರ್ವ ಪಕ್ಷಗಳ ಸಭೆಗೆ ಬನ್ನಿರಿ ಅಂದರೆ ಅದು ಸದನವಾಗುವುದಿಲ್ಲ ದೆಹಲಿಯ ಸಂಸತ್ಸದಸ್ಯರ ಸಭೆ ಸದನವಾಗುವುದಿಲ್ಲ ಸದನ ಅಂದರೆ ಬಹಳ ಪವಿತ್ರತೆ ಇರುವಂತಹುದು ಸಂವಿಧಾನಬದ್ಧ ಸಭೆಯಲ್ಲಿ ನೀವು ನಿರ್ಣಯ ಮಾಡಬೇಕೇ ಹೊರತು ಬೇರೆ ಕಡೆ ದಿಕ್ಕು ತೋರುವುದು ಈ ಸದನದ ಹಕ್ಕುಚ್ಯುತೀನೂ ಆಗುತ್ತದೆ ಆದ್ದರಿಂದ ಇವತ್ತು ಸಂಜೆಯೊಳಗಾದರೂ ನೀವು ನಿರ್ಣಯ ಮಾಡಿದರೆ ನನಗೆ ಬಹಳ ಸಂತೋಷವಾಗುತ್ತದೆ, ಅದುಬಿಟ್ಟು ಸದನ ಬಿಟ್ಟು ಎಲ್ಲೋ ಅರಳಿ ಮರದ ಕೆಳಗೆ ಮಾಡುತ್ತೇವೆ, ಕಬ್ಬನ್‌ಪಾರ್ಕ್‌ನಲ್ಲಿ ಮಾಡುತ್ತೇವೆ ಎನ್ನುವುದಲ್ಲ ಅದು ರಾಜ್ಯದ ಜನತೆಗೆ ಅತ್ಯಂತ ಅಗೌರವ ತಮಿಳುನಾಡಿನವರು ನಗುತ್ತಾರೆ, 21

ತಾರೀಖಾಗಿದೆ, ಸರ್ಕಾರದ ನಿರ್ಧಾರವೇನು, ಸಮಸ್ಯೆಯೇನು ಎಂದು ಚಕಾರವೂ ಎತ್ತಿಲ್ಲ ಎಂದು ಅಲ್ಲಿ ಏನಾಗಿದೆ ಅಂತ ತಮಗೂ ಗೊತ್ತಿರಬೇಕು ದಯವಿಟ್ಟು ನಿರ್ಣಯ ಇಲ್ಲಿ ಮಾಡುತ್ತೀರೋ ಇಲ್ಲವೋ ಅಷ್ಟು ಹೇಳಿ

ಶ್ರೀ ಕೆ ಎಸ್ ಈಶ್ವರಪ್ಪ ತಮಿಳುನಾಡು ಸದನದಲ್ಲೂ ಚರ್ಚೆಯೇನೂ ಆಗಿಲ್ಲ ನಿರ್ಣಯವೂ ಆಗಿಲ್ಲ ಈ ಸದನ ಸರ್ವೋಚ್ಚ, ಅದಕ್ಕೆ ಸಂಪೂರ್ಣ ಗೌರವ ನಾವು ತೋರುತ್ತೇವೆ ಖಂಡಿತ ನಾವು ತಾತ್ಸಾರ ಮಾಡುತ್ತಿಲ್ಲ ಸದನದ ಎಲ್ಲ ಸದಸ್ಯರಿಗೂ ಒಂದೊಂದು ಕಾಪಿ ಕೊಟ್ಟಿದ್ದೇವೆ ತಮ್ಮ ಕಳಕಳಿ ಖಂಡಿತ ನಮಗೆ ಅರ್ಥವಾಗುತ್ತದೆ ತಾವೂ ಕರ್ನಾಟಕವೆಲ್ಲ ಒಂದೇ ಧ್ವನಿಯಿಂದ ಹೋರಾಟ ಮಾಡುತ್ತಿರುವುದಕ್ಕೋಸ್ಕರ ನ್ಯಾಯಾಧಿಕರಣವಿರಬಹುದು ಕೇಂದ್ರ ಸರ್ಕಾರವಿರಬಹುದು ಅವರ ತನಕ ಈ ಧ್ವನಿ ಮುಟ್ಟಿದೆ ಹೀಗಾಗಿ ಸದನಕ್ಕೆ ಅಗೌರವ ತೋರಿಸುವ ಪ್ರಶ್ನೆ ಇಲ್ಲ ಅವತ್ತು ಏನು ತೀರ್ಮಾನವಾಗಿದೆ ಅಂದರೆ ಎಲ್ಲ ಪಕ್ಷಗಳೂ ಒಟ್ಟಿಗೇ ಸೇರಿ ತೀರ್ಮಾನ ಮಾಡೋಣ, ಒಂದೊಂದು ಕಾಪಿ ಕೊಡಿ ಅಂತ ಅದರಂತೆ 22ನೇ ತಾರೀಖು ಸಂಸತ್ಸದಸ್ಯರ ಸಭೆ, ಅರಳಿಮರಕ್ಕೆಲ್ಲ ದಯವಿಟ್ಟು ಹೋಲಿಸಬೇಡಿ, ಇಡೀ ಕರ್ನಾಟಕದ ಎಲ್ಲ ಪಕ್ಷಗಳೂ ತೀರ್ಮಾನ ಮಾಡಿದ್ದನ್ನು ಹೇಳುತ್ತಿದ್ದೇನೆ, ಎಲ್ಲ ನೀರಾವರಿ ಕಾನೂನು ಪರಿಣತರು ಹೇಳಿರುವುದನ್ನು ಹೇಳುತ್ತಿದ್ದೇನೆ, ಆ ಸಭೆಯನ್ನು ಖಂಡಿತ ನಾನು ಅಗೌರವದಿಂದ ನೋಡುವುದಿಲ್ಲ ಅಲ್ಲಿ ಏನು ಅಭಿಪ್ರಾಯ ಕೊಟ್ಟಿದೆಯೋ ಅದಕ್ಕೆ ರಾಜ್ಯ ಸರ್ಕಾರ ಬದ್ಧವಾಗಿರುತ್ತದೆ

ಶ್ರೀ ವಾಟಾಳ್ ನಾಗರಾಜ್ ಹಿಮಾಲಯ ಪರ್ವತವಿರಬಹುದು, ಆ ಸಭೆಯಲ್ಲಿ ಬಹಳ ಮೇಧಾವಿಗಳಿರಬಹುದು, ಮಹಾ ಪಂಡಿತರಿರಬಹುದು, ಆದರೆ ಸದನ ಆಗುವುದಿಲ್ಲ ಇದು ಈ ರಾಜ್ಯದ ಪ್ರಾತಿನಿಧಿಕ ಶಾಸಕರ ಸದನ ಇಲ್ಲಿ ನೀವು ನಿರ್ಣಯ ಮಂಡಿಸಿದರೆ ಅದಕ್ಕೆ ಶಕ್ತಿ ಇದರ ಬಗ್ಗೆ ನೀವು ಯಾಕೆ ಹೆದರುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ ಈ ತೀರ್ಪಿನ ಬಗ್ಗೆ ಮುಖ್ಯಮಂತ್ರಿಗಳು ಯಾಕೆ ಮೌನವಾಗಿದ್ದೀರಿ? ಈ ತೀರ್ಪಿನಿಂದ ನಮಗೆ ಅನುಕೂಲವಾಗಿದ್ದರೆ ಹಾಗೆ ಹೇಳಿ, ಇಲ್ಲ ಅಂದರೆ ಇಲ್ಲ ಅನ್ನಿ ಅದಕ್ಕೆ ನಾವು ಸಂಪೂರ್ಣವಾಗಿ ರಾಜಕೀಯ ಬೆರೆಸದೆ ತೀರ್ಮಾನ ತೆಗೆದುಕೊಳ್ಳೋಣ ಅದು ಬಿಟ್ಟು 5ನೇ ತಾರೀಖಿನಿಂದ ನಾನು ಒಂದೇ ಸಮನೆ ಒತ್ತಾಯ ಮಾಡುತ್ತಿದ್ದೇನೆ ಇಲ್ಲಿ ಒಂದು ನಿರ್ಣಯ ಮಾಡಿ ಅದರ ಬಗ್ಗೆ ಮಿಕ್ಕವರನ್ನು ಕೇಳುತ್ತೇವೆ ಅಂತ ಒಂದು ತೀರ್ಮಾನ ಮಾಡಿ ಅದು ಮಾಡದೆ ಅಲ್ಲಿ ಮಾಡುತ್ತೇವೆ ಅಂದರೆ ಈ

ಸದನಕ್ಕಿಂತ ಅದೇ ಸರ್ವೋಚ್ಚ ಎಂದು ಬರುತ್ತದೆ, ಹಾಗೆ ಬರತಕ್ಕದ್ದಲ್ಲ ಈಗ ಒಂದು ತೀರ್ಮಾನ ಕೈಗೊಳ್ಳಬೇಕು

ಶ್ರೀ ಜಿ ವಿ ಶೀರಾಮರೆಡ್ಡಿ ಅಧ್ಯಕ್ಷರೇ ಮಾನ್ಯ ಈಶ್ವರಪ್ಪನವರು ಹೇಳಿದ ಸರ್ವ ಪಕ್ಷ ಸಭೆಗಳಲ್ಲಿ ಏನು ತೀರ್ಮಾನವಾಗುತ್ತದೋ ಅದನ್ನು ವಿಧಾನಸಭೆಯಲ್ಲಿ ನಿರ್ಣಯ ಮಾಡೋಣ ಎಂಬುದು ಸರಿಯಲ್ಲ ಸದನ ಸರ್ವೋಚ್ಚವಾದುದು, ಸರ್ವ ಪಕ್ಷಗಳ ಸಭೆ ಬಗ್ಗೆ ಗೌರವವಿದೆ, ಅದರಲ್ಲಿ ನಾವೂ ಭಾಗಿಗಳು, ಅದರ ತೀರ್ಮಾನಕ್ಕೆ ಬದ್ಧ, ಅದು ಬೇರೆ ವಿಚಾರ ಸರ್ವ ಪಕ್ಷದ ಸಭೆಗೆ ಈ ಸದನ ಒಂದು ರೀತಿ subordinate ಆಗಿದೆ ಎಂಬ ನಿಮ್ಮ ಮಾತು ಸರಿಯಾದದ್ದಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆರೋಗ್ಯಕರ ಬೆಳವಣಿಗೆಯಲ್ಲ This House is not the creation of that. Do not try to make this house subordinate to All Parties Meeting

ಶ್ರೀ ಕೆ ಎಸ್ ಈಶ್ವರಪ್ಪ ಸರ್ವ ಪಕ್ಷ ಸಭೆಯಲ್ಲಿ ಏನು ತೀರ್ಮಾನವಾಗುತ್ತದೋ ಅದರಂತೆ ಇಲ್ಲಿ ನಿರ್ಣಯ ಮಾಡೋಣ ಅಂತ ನಾನು ಹೇಳಲಿಲ್ಲ ನಾನು ಹೇಳುತ್ತಿರುವುದು ಸರ್ವ ಪಕ್ಷದ ಸಭೆಯ ತೀರ್ಮಾನಕ್ಕೆ ಸರ್ಕಾರ ಬದ್ದವಾಗಿ ನಡೆದುಕೊಳ್ಳುತ್ತದೆ, ಇದರಲ್ಲೇನು ಹಿಂದೆಮುಂದೆ ಇಲ್ಲ

ಶ್ರೀ ಹೆಚ್ ಡಿ ರೇವಣ್ಣ ಈ ರಾಜ್ಯದ ಐದೂವರೆ ಕೋಟಿ ಜನರ, ತಂತ್ರಜ್ಞರೆಲ್ಲರ ಅಭಿಪ್ರಾಯ ಪಡೆದು ಹಾಗೆ ಮಾಡೋಣ ಅಂತ ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ ಬೇಕಾದರೆ ಅದೇನು ಬೇಕೋ ಇಲ್ಲೇ ಚರ್ಚೆಯಾಗಲಿ, ಹಾಗೆ ಮಾಡೋಣ

ಶ್ರೀ ರಾಜೇಂದ್ರನ್ ಮಾನ್ಯ ಈಶ್ವರಪ್ಪನವರು ಹೇಳಿದ್ದು ಸರ್ವ ಪಕ್ಷ ಸಭೆಯಲ್ಲಿ ಚರ್ಚೆ ಮಾಡೋಣ, ಅಲ್ಲಿ ಶಾಸನಸಭೆ ಕರೆಯಬೇಕು ಅಂದರೆ ಹಾಗೆ ಮಾಡೋಣ ಅಂತ ಬೇಕಾದರೆ ದಾಖಲೆ ನೋಡಿ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೇ, 57ವರ್ಷಗಳಿಂದಲೂ ಈ ಸಭೆಯ ಸಾರ್ವಭೌಮತ್ವ ಏನು ಬೆಳೆಯುತ್ತಾ ಹೋಗಬೇಕಾಗಿತ್ತೊ ಅದು ಇಳಿಯುತ್ತಾ ಬರುತ್ತಿದೆ ಎಂದು ನಮಗೆ ಅನಿಸುತ್ತಿದೆ Governor ಅವರನ್ನು ಹೋಗಿ ಕೇಳುವುದು, ನಮ್ಮ ರಾಜ್ಯ ಸಭಾ Secretariat ಅವರನ್ನು ಕೇಳುವುದು, Parliament Secretariat ಅವರನ್ನು ಕೇಳುವುದು, ಯಾವುದಾದರೂ issue ಬಂದರೆ ನಾವು Primary School, ಅಥವಾ High School Master ಗಳನ್ನು ಕೇಳಿಕೊಂಡು ಬಂದು ಉತ್ತರ ಹೇಳುತ್ತೇವೆನ್ನುವ ಸ್ಥಿತಿಯನ್ನು ನಾವು ಇಲ್ಲಿ ನಿರ್ಮಾಣ ಮಾಡಿಕೊಳ್ಳುತ್ತಿದ್ದೇವೆ ಇದು ಯಾವುದೂ

ನಿಜವಾಗಿಯೂ ಈ ಸಭೆಗೆ ಗೌರವ ತರುವ ವಿಷಯಗಳಲ್ಲ ಕಾವೇರಿ ವಿಷಯದ ಬಗ್ಗೆ ನಾನು ಹೇಳುತ್ತಿಲ್ಲ ಯಾವ ಸಂವಿಧಾನವನ್ನು Governor ರವರು ನೋಡಿ ಹೇಳುತ್ತಾರೆ, ಆ ಸಂವಿದಾನ ಇಟ್ಟುಕೊಂಡೇ ನಾವು ಇಲ್ಲಿ ಸಭೆಗಳನ್ನು ನಡೆಸಬೇಕಾಗಿದೆ ಇದಕ್ಕೋಸ್ಕರ ನಿಮಗೆ ಕಾನೂನು ಅಡ್ವೈಸರ್ಸ್ ಇದ್ದಾರೆ, Secretary ಗಳಿದ್ದಾರೆ, ಸರ್ಕಾರ ನಡೆಸಬೇಕಾದರೆ ಅವರು ಮಾಹಿತಿಯನ್ನು ತಂದು ನಿಮಗೇನು ಅನುಮಾನಗಳು ಬರುತ್ತವೆ, ಅವುಗಳನ್ನು ನಿವಾರಣೆ ಮಾಡಬೇಕಾಗುತ್ತದೆ ಸರ್ಕಾರ ನಡೆಸುವವರು ನಾವು ಯಾರನ್ನೊ ಕೇಳಿ ಏನೊ ಮಾಡುತ್ತೇವೆ, ಯಾರನ್ನೊ ಕೇಳಿ ಏನೊ ಮಾಡುತ್ತೇವೆಂದು ಹೇಳಿ ವಿರೋಧ ಪಕ್ಷಗಳೂ ವರ್ತಿಸುವುದು, ಸರ್ಕಾರವೂ ವರ್ತಿಸುವುದು, ನಿಜವಾಗಿಯೂ ಈ ಶಾಸನಸಭೆಗೆ ಘನತೆ ಬರುವ ಸ್ಥಿತಿ ನಿರ್ಮಾಣವಾಗಿಲ್ಲ ನಾನು ಯಾರ ಮೇಲೂ ಅಗೌರವವನ್ನು ಸೂಚಿಸುವುದಕ್ಕೆ ನಾನು ಈ ಮಾತನಾಡುತ್ತಿಲ್ಲ ನಾವು ಸಂವಿಧಾನಾತ್ಮಕವಾಗಿ ನಡೆಸಬೇಕಾಗಿರುವಂಥ autonomy ಇರುವಂಥ ಸಭೆಯಲ್ಲಿ ಕುಳಿತಿದ್ದೇವಾ ಎಂದು ನನಗೆ ಅನುಮಾನ ಬರುತ್ತಿದೆ ಈ ಸಭೆ ಯಾರು ನಡೆಸಬೇಕು? ಸರ್ಕಾರ ಯಾರ ಸೃಷ್ಟಿ? ಯಾರು ಜನಗಳ mandate ತೆಗೆದುಕೊಂಡು ಬಂದು ಇಲ್ಲಿ ಕುಳಿತಿದ್ದೇವೆ? ಜನ ಯಾರಿಂದ ಪ್ರಾತಿನಿಧಿಕ ಹಕ್ಕನ್ನು ನಿರೀಕ್ಷೆ ಮಾಡುತ್ತಿದ್ದಾರೆ? ಈ ರಾಜ್ಯದ ಜನತೆಗೆ ಬಾಯಿ ಯಾರು? ಎಲ್ಲರ ಅಭಿಪ್ರಾಯವನ್ನು ಮಾತನಾಡಬೇಕಾಗಿರುವವರು ಯಾರು? ನಮ್ಮ ಪೂರ್ಣ ಅಧಿಕಾರವನ್ನು ಬೇರೆ ಎಲ್ಲಿಗೊ ವರ್ಗಾವಣೆ ಮಾಡಿಕೊಂಡು ಹೋಗುವುದು ಮಾನ್ಯ ಈಶ್ವರಪ್ಪನವರೇ, ಅಷ್ಟು ಚೆನ್ನಾಗಿ ಕಾಣುವುದಿಲ್ಲ ನಮ್ಮನ್ನು ನಾವೇ ಏಕೆ ಹೀಗೆ ಕೆಳಗೆ ಇಳಿಸಿಕೊಂಡು ಹೋಗುತ್ತಿದ್ದೇವೆ? ಸರ್ವ ಪಕ್ಷದ ಸಭೆಯನ್ನು ಕರೆಯುವುದು, ಹಿರಿಯರನ್ನು ಕರೆಯುವುದು, ತಜ್ಞರನ್ನು ಕರೆಯುವುದು ಎಲ್ಲ ಗೌರವವೇ ನಾವ್ಯಾರು ಅವರಿಗೆ ಅಗೌರವ ಮಾಡಿ ಎಂದು ಹೇಳುತ್ತಿಲ್ಲ ಆದರೆ ಅವತ್ತಿಂದ ಹೇಳುತ್ತಿದ್ದೇವೆ, ಈ ಶಾಸನಸಭೆಯ ಸಾರ್ವಭೌಮತ್ವವನ್ನು ದಯಮಾಡಿ ಕೆಳಗೆ ಇಳಿಸಬೇಡಿ ನಾಳೆ ಬರುವವರಿಗಾದರೂ ಏನಾದರೂ ಉಳಿಸಿ ಹೋಗೋಣ ಇದು ಒಂದು ವಿಧಾನಸಭೆ ಇಲ್ಲಿ ಆಗುವ ನಿರ್ಣಯ ರಾಜ್ಯದ ನಿರ್ಣಯ ಇಲ್ಲಿ ಆಗುವ ನಿರ್ಣಯವನ್ನು ಸರ್ಕಾರ ಪಾಲಿಸಬೇಕಾಗುತ್ತದೆ ಇಲ್ಲಿ ಆಗುವ ನಿರ್ಣಯ ಸರ್ಕಾರದ ಮೇಲೆ binding ಆಗಿರುತ್ತದೆ ಸರ್ಕಾರ ಈ ಮನೆಯ ಸೃಷ್ಟಿ ಅದಕ್ಕೋಸ್ಕರ ಈ ಮನೆ ಇದೆ ಎನ್ನುವ ಭಾವನೆಯನ್ನೇ ನಾವು ಉಳಿಸದೇ ಹೋದರೆ ಎಲ್ಲ ತೀರ್ಮಾನಗಳನ್ನು ಆಚೆ ಮಾಡಿಕೊಂಡು ಬಂದು ಇಲ್ಲಿ ಡಿಕ್ಟ್ರಿ

ಮಾಡಿಕೊಳ್ಳುವುದಕ್ಕೆ ನಾವು ಇದ್ದೇವಾ? Outside court settlement ಮಾಡಿಕೊಂಡು ಬಂದು ಇಲ್ಲಿ decree ಮಾಡಿ ಜಡ್ಜ್ ಸಾಹೇಬರೆ ಎಂದು ಕೇಳುವುದಕ್ಕೆ ನಾವು ಬರುತ್ತಿದ್ದೇವಾ? ಚರ್ಚೆ ಇಲ್ಲಿ ಆಗುವುದೇ ಅರ್ಥ ಚರ್ಚೆ ಇಲ್ಲಿ ಆಗಬೇಕು ಇಲ್ಲಿ ಶಾಸಕರುಗಳು ಮಾತನಾಡಬೇಕು ಆ ಭಾಗದಿಂದ ಬಂದಿರುವವರ ಅಭಿಪ್ರಾಯವನ್ನು ಹೇಳಬೇಕು ನಾವು ಆಚೆ ಕಡೆ ಕುಳಿತುಕೊಂಡು ನಾವ್ಯಾರೊ ನಾಲ್ಕು ಜನ ಮಾತನಾಡುವುದು ಶ್ರೇಷ್ಟವಾಗಬಾರದು ಆ ನಂತರ ಅವರ ಅಭಿಪ್ರಾಯವನ್ನು ತೆಗೆದುಕೊಂಡು ತಾವೊಂದು ತೀರ್ಮಾನಕ್ಕೆ ಬರಬೇಕು ಶಾಸನಸಭೆಯಲ್ಲಿ ತಾವು ಚರ್ಚೆಯನ್ನು ಮಾಡಬೇಕು ನಿರ್ಣಯ ಮಾಡುತ್ತೀರೊ ಮಾಡುವುದಿಲ್ಲವೊ ಮಾಡುವುದಕ್ಕೆ ಲಾಯಕ್ ಆದ ವಸ್ತುವೊ ಅಲ್ಲವೊ ಅದನ್ನು ನಿಮಗೆ ಬಿಟ್ಟುಬಿಡುತ್ತೇವೆ ಹೀಗೆ ಮಾಡಿ ಹಾಗೆ ಮಾಡಿ ಎನ್ನುವುದಕ್ಕಾಗುವುದಿಲ್ಲ ಇಲ್ಲಿರುವವರ ಅಭಿಪ್ರಾಯವನ್ನಾದರೂ ಕೇಳಬೇಕಲ್ಲವೇ? ಇವತ್ತು ನಿಮ್ಮ ಪಕ್ಷವೆ ಬಿಜೆಪಿ ಪಕ್ಷ ಬಂದ್‌ಗೆ ನಾವು ಸಹಾಯ ಮಾಡಿದ್ದೇವೆ ಎಂದು ಹೇಳುತ್ತೆ ತಾವು you are heading the department ಇವತ್ತು ತಾವು ಇರಿಗೇಷನ್ ಮಂತ್ರಿಗಳು ತಮ್ಮ ಪಕ್ಷ ಅವತ್ತು ಸಾರ್ವಜನಿಕವಾಗಿ ಬಂದ್ ಕರೆಗೆ ನಾವು ಸ್ವಾಗತಿಸುತ್ತೇವೆ ಮತ್ತು ನಿಮ್ಮ ಅಭಿಪ್ರಾಯ ರಾಜ್ಯದ ಜನರಿಗೆ ಗೊತ್ತಾಗಬೇಕಲ್ಲ ನೀವೇನು ಹೇಳುತ್ತೀರಿ ಎಂದು ಗೊತ್ತಾಗಬೇಕಲ್ಲ ಕಾಂಗ್ರೆಸ್ ಪಕ್ಷ ಬಂದ್ ಮಾಡುವುದನ್ನು ಸ್ವಾಗತಿಸುತ್ತೇವೆ ಎಂದು ಹೇಳುತ್ತೆ ನಾವೆಲ್ಲ ಸ್ವಾಗತಿಸಿದ್ದೇವೆ ನಾವೆಲ್ಲ ಆಚೆ ಹೋಗಿದ್ದೇವೆ ಎಂದು ನಾವು ಹೇಳುತ್ತೇವೆ ಇದು ಏನಾಗಿದೆ ಎಂದು ಗೊತ್ತಾಗಬೇಕಲ್ಲ ಏತಕ್ಕಾಗಿ ನಾವು ಇದನ್ನೆಲ್ಲ ಮಾಡಿದ್ದೇವೆಂದು ಗೊತ್ತಾಗಬೇಕಲ್ಲ ಆ ಪುಸ್ತಕದಲ್ಲಿ ಏನಿದೆ ಎಂದು ಹೇಳಬೇಕಲ್ಲ ಅನ್ಯಾಯವಾಗಿದೆಯೊ, ನ್ಯಾಯವಾಗಿದೆಯೊ, ಅಧಿಕೃತವಾಗಿ ನಮಗೆ ನ್ಯಾಯವನ್ನು ಕೊಡಬಹುದಾಗಿತ್ತು, ಇದು ಎಲ್ಲಿ ಚರ್ಚೆಯಾಗಬೇಕು ಸಾರ್? ನೀವೆ ಹೇಳಿದ್ದಿರಿ ಆ ಸಭೆಯಲ್ಲಿ, ತಮಿಳುನಾಡಿನವರು ಐದಾರು ಗಂಟೆ ಚರ್ಚೆ ಮಾಡಿದ್ದಾರೆ ಎಂದು ನಾವೇನು ಮಾಡುತ್ತೇವೆ ಈ ಸರ್ವ ಪಕ್ಷದ ಸಭೆಯಲ್ಲಿ 3–4 ಜನರು ಯಾರೊ ಮಾತನಾಡುತ್ತೇವೆ ಎದ್ದು ಹೋಗುತ್ತೇವೆ ಯಾವ ನಿರ್ಣಯವನ್ನು ಅಲ್ಲಿ ನಾವು ತೆಗೆದುಕೊಳ್ಳುವುದಕ್ಕಾಗುತ್ತದೆ? ದಯಮಾಡಿ ಕಾವೇರಿ issue ಅದು ಸರಿಯೊ ತಪ್ಪೊ, ನ್ಯಾಯವಾಗಿದೆಯೋ, ಅನ್ಯಾಯವಾಗಿದೆಯೊ ಅದು ಈ ಸಭೆಯಲ್ಲಿ ಒಂದು ಸಲ ಚರ್ಚೆಯಾಗಬೇಕು ನಾವು ನಿರ್ಣಯವನ್ನು ಮಾಡಿ ಎಂದು ನಿಮ್ಮನ್ನು demand ಮಾಡುವುದಿಲ್ಲ ನಿರ್ಣಯ ಮಾಡುವುದಕ್ಕೆ

ಸಾಧ್ಯವೊ ಅಲ್ಲವೊ ಸಭೆಯ ಅಭಿಪ್ರಾಯ ಏನು ಬರುತ್ತದೆ ಅದನ್ನು ತೆಗೆದುಕೊಳ್ಳಬೇಕು ಸಭೆಯ ಸಾರ್ವಭೌಮತ್ವವನ್ನು ತಾವು ಕೆಳಕ್ಕೆ ಇಳಿಸಬಾರದು ಆ ಸ್ಥಿತಿಯನ್ನು ರಾಜ್ಯದಲ್ಲಿ ನಿರ್ಮಾಣ ಮಾಡಬಾರದು ಎಂದು ಹೇಳಿ ಒತ್ತಾಯವನ್ನು ಮಾಡುತ್ತೇನೆ

ಶ್ರೀ ಜಯಪ್ರಕಾಶ್ ಕೆ ಹೆಗ್ಡೆ (ಬ್ರಹ್ಮಾವರ) ಮಾನ್ಯ ಅಧ್ಯಕ್ಷರೆ, ನಾನು ಸಹಾ ಸರ್ವ ಪಕ್ಷಗಳ ಸಭೆಗೆ ಹೋಗಿದ್ದೇನೆ ಆದರೆ ಸರ್ವ ಪಕ್ಷಗಳ ಸಭೆಗಳಲ್ಲಿ ಕಾವೇರಿ ಬೇಸಿನ್‌ನ ಶಾಸಕರು ಯಾರೂ ಬರುವುದಿಲ್ಲ ಬಂದರೂ ಅಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಸಿಗುವುದಿಲ್ಲ ಈ ಸದನದಲ್ಲಿ ಆದರೆ ಎಲ್ಲರಿಗೂ ಅವಕಾಶ ಸಿಗುತ್ತದೆ ಆ ಭಾಗದ ಜನರ ಪ್ರತಿನಿಧಿಗಳು, ಶಾಸಕರೇನು ಇದ್ದಾರೆ, ಅವರ ಅಭಿಪ್ರಾಯವನ್ನು ಹೇಳಬೇಡವೇ? ತಾವು ಯಾವ ಅರ್ಥದಲ್ಲಿ ಹೇಳಿದ್ದೀರಿ ನನಗೆ ಗೊತ್ತಿಲ್ಲ ತಾವು ಹೇಳಲಿಲ್ಲವೆಂದು ಹೇಳಿದಿರಿ ತಾವು ಹೇಳಿದ್ದು ಅಲ್ಲಿ ಏನು ತೀರ್ಮಾನ ಆಗುತ್ತದೆ, ಅದನ್ನು ಇಲ್ಲಿ ಜಾರಿ ಮಾಡೋಣವೆಂದು ಅದಲ್ಲ ಅದಕ್ಕಿಂತ ಈ ಸಭೆಯಲ್ಲಿ ಚರ್ಚೆಯನ್ನು ಮಾಡಿ ಏನು ಕಾವೇರಿ ಬೇಸಿನ್‌ನಿಂದ ಶಾಸಕರುಗಳು ಬರುತ್ತಾರೆ, ಅವರಿಗೆ ಹೆಚ್ಚು ಅವಕಾಶವನ್ನು ಕೊಡೋಣ ಎಲ್ಲರೂ ಚರ್ಚೆ ಮಾಡೋಣ

ಶ್ರೀ ಹೆಚ್ ಆಂಜನೇಯ ಇಡೀ ರಾಜ್ಯದ ಎಲ್ಲ ಶಾಸಕರ ಜವಾಬ್ದಾರಿ ಇದೆ ಎಲ್ಲರೂ ಸೇರಿಕೊಂಡು ಮಾಡೋಣ

ಶ್ರೀ ಜಯಪ್ರಕಾಶ್ ಕೆ ಹೆಗ್ಡೆ ಪ್ರಥಮವಾಗಿ ಈಗ ಕಾವೇರಿ ಬೇಸಿನ್‌ನ ಸದಸ್ಯರುಗಳು ಮಾತನಾಡಲಿ ಆಮೇಲೆ ಎಲ್ಲ ಶಾಸಕರು ಈ ಸದನದಲ್ಲಿ ಚರ್ಚೆಯನ್ನು ಮಾಡಲಿ ಈ ಸದನ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತದೊ, ನೋಡೋಣ

ಶ್ರೀ ಎಂ ಪಿ ಪ್ರಕಾಶ್ (ಕಾನೂನು ಮತ್ತು ಸಂಸದೀಯ ಹಾಗೂ ಗೃಹ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ಈಶ್ವರಪ್ಪನವರಾಗಲಿ, ಮಾನ್ಯ ಮುಖ್ಯಮಂತ್ರಿಗಳಾಗಲಿ, ಈಗ ಅವರು ಅಭಿಪ್ರಾಯ ಪಟ್ಟಿರುವಂತೆ

ಶ್ರೀ ಹಂಪನಗೌಡ ಬಾದರ್ಲಿ ಮಾನ್ಯ ಅಧ್ಯಕ್ಷರೇ, ಕಾವೇರಿ ವಿಚಾರದ ಜೊತೆಗೆ ತುಂಗಭದ್ರಾ ಕ್ಕೂ ಕೂಡ ಅವಕಾಶವನ್ನು ಕೊಡಿ ಮಾತನಾಡುವುದಕ್ಕೆ

ಅಧ್ಯಕ್ಷರು ಒಂದು ವಿಚಾರವನ್ನು ಎತ್ತಿದ ಮೇಲೆ ಅದು complete ಆಗಲಿ ಕುಳಿತುಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್ ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಈಶ್ವರಪ್ಪನವರಾಗಲಿ, ಮಾನ್ಯ ಮುಖ್ಯಮಂತ್ರಿಗಳಾಗಲಿ, ವಿರೋಧ ಪಕ್ಷದ ನಾಯಕರನ್ನು ಸರ್ವ ಪಕ್ಷಗಳ ನಾಯಕರುಗಳನ್ನು ಕರೆಸಿ ಅಭಿಪ್ರಾಯವನ್ನು

ಕ್ರೋಢೀಕರಿಸತಕ್ಕಂಥ ಪಯತ್ನ, ಯಾವ ದೃಷ್ಟಿಯಿಂದಲೂ ಕೂಡ ಈ ಮನೆಯ ಸಾರ್ವಭೌಮತ್ವವನ್ನಾಗಲಿ ಇದರ ಮಹತ್ವವನ್ನಾಗಲಿ ಕಡಿಮೆ ಮಾಡಬೇಕೆನ್ನತಕ್ಕ ಉದ್ದೇಶ ಅವರಿಗೆ ಉತ್ತರ ಕೊಡುವಾಗ ಇರಲಿಲ್ಲ ಈಗ ಇಲ್ಲಿ ಸದನದಲ್ಲಿ ಚರ್ಚೆ ಏನಾಗುತ್ತಿದೆ, ಹೊರಗಡೆ ಇರುವ ಅಭಿಪ್ರಾಯಗಳು ಮತ್ತು ಸದನದಲ್ಲಿ ಆಗತಕ್ಕ ಚರ್ಚೆಗಳನ್ನು ನಾವು ಎಲ್ಲ ಮುಖಂಡರ ಜೊತೆಗೆ ಕೂಡಿ ಒಂದು ಒಮ್ಮತದ ನಿರ್ಣಯವನ್ನು ಇಲ್ಲಿ ಮಾಡುತ್ತೇವೆ ಆ ಒಮ್ಮತದ ನಿರ್ಣಯವನ್ನು ಮಾಡಿಕೊಂಡು ಅದರ ಮೂಲಕವಾಗಿ ನಾವು ಒಂದು ಗೊತ್ತುವಳಿ ಮಾಡಬೇಕು ಎಂದು ನಿರ್ಧಾರವಾದರೆ ಗೊತ್ತುವಳಿಯನ್ನು ತರುತ್ತೇವೆ ಗೊತ್ತುವಳಿಯನ್ನು ತರದೇ ನಾವು ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗಬೇಕೆಂದು ನಿರ್ಧಾರವಾದರೆ ಸರ್ಕಾರ ಅದರ ಬಗ್ಗೆ ಯೋಚನೆ ಮಾಡಿ ತೆಗೆದುಕೊಳ್ಳುತ್ತದೆ ಇಲ್ಲ, ಕಾನೂನಾತ್ಮಕವಾದ ಚೌಕಟ್ಟಿನಲ್ಲಿ ಅದನ್ನು ಪರಿಹರಿಸಬೇಕೆಂದಾದರೆ ಅದನ್ನು ಕೂಡ ಮಾಡುತ್ತದೆ

ಅಧ್ಯಕ್ಷರು: ಆಯಿತು

ಶ್ರೀ ವಾಟಾಳ್ ನಾಗರಾಜ್ ಈಗ ಚರ್ಚೆ ಇಲ್ಲವೆಂದು ತೀರ್ಮಾನವಾಯಿತು ಈ ಸದನದಲ್ಲಿ ಚರ್ಚೆ ಇಲ್ಲವೆಂದಾಯಿತು ಇನ್ನು ಹೇಗೆ? ಇವತ್ತು ಸದನ ಮುಗಿಯುತ್ತಿದೆ ಚರ್ಚೆ ಇಲ್ಲಿ ಆಗುತ್ತಿಲ್ಲವೆಂದು ತೀರ್ಮಾನವಾಯಿತು ಇಲ್ಲ, ಸದನವನ್ನು ನಾಳೆಗೆ ಮುಂದುವರಿಸಿದ್ದೇವೆ, ನಾಳೆ ಕಾವೇರಿ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ನನ್ನದೇನೂ ಅಭ್ಯಂತರವಿಲ್ಲ ಇವತ್ತು ಸದನ ಮುಂದೆ ಹೋಗುತ್ತಿದೆ ಇದು ಒಂದು ಎರಡನೆಯದು, ಇಷ್ಟರಲ್ಲಿಯೇ ಚರ್ಚೆ ಮಾಡಬಹುದಾಗಿತ್ತು ಇಲ್ಲಿ ಸಮಗ್ರವಾಗಿ ಸದನದಲ್ಲಿ ಚರ್ಚೆಯಾಗಬೇಕಲ್ಲ ಚರ್ಚೆಗೆ ನೀವು ಅವಕಾಶವನ್ನು ಕೊಡಬೇಕಲ್ಲ ಎಲ್ಲಿ ಅವಕಾಶವನ್ನು ಕೊಟ್ಟಿದ್ದೀರಿ?

ಶ್ರೀ ಎಂ ಪಿ ಪ್ರಕಾಶ್. ಗೊತ್ತುವಳಿ ಮಾಡಬೇಕೆಂದರೆ ಸಮಗ್ರ ಚರ್ಚೆ ಸದನದಲ್ಲಿ ಆಗುತ್ತದೆ ಕಾನೂನಾತ್ಮಕವಾಗಿ ಅದನ್ನು ಬಗೆಹರಿಸಿಕೊಳ್ಳಬೇಕೆಂದರೆ ಅದು ಕಾನೂನಾತ್ಮಕವಾಗಿ ಆಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಗೊತ್ತುವಳಿ ಮಾಡಿ ಎಂದು ಹೇಳುವವರು ಯಾರು? ಅವರಲ್ಲ ಈ ಸದನ ಚರ್ಚೆಗೆ ಅವಕಾಶವನ್ನು ಕೊಡಿ ತಾವು ಕಾವೇರಿ ಬಗ್ಗೆ ಚರ್ಚೆಗೆ ಅವಕಾಶವನ್ನು ಕೊಡಿ

ಶ್ರೀ ಎಂ ಪಿ ಪ್ರಕಾಶ್ ಮಾಡೋಣ

ಶ್ರೀ ವಾಟಾಳ್ ನಾಗರಾಜ್ ಈಗ ಶುರುವಾಗಲಿ ಬೇಕಾದರೆ 12 ಗಂಟೆ ರಾತ್ರಿಯವರೆಗೂ ಮಾಡಿ ನನ್ನದೇನೂ ಅಭ್ಯಂತರವಿಲ್ಲ ಚರ್ಚೆ ಶುರುಮಾಡಿ ಸ್ವಾಮಿ ಕಾವೇರಿ ಚರ್ಚೆ ಮಾನ್ಯ ಮುಖ್ಯಮಂತ್ರಿಗಳಿಂದ ಆರಂಭ ಆಗಲಿ ಮಾನ್ಯ ಮುಖ್ಯಮಂತ್ರಿಗಳು ಚರ್ಚೆಯನ್ನು ಆರಂಭಿಸಲಿ ಕಾವೇರಿ ಚರ್ಚೆಯನ್ನು ಆರಂಭಿಸಿ ಇವತ್ತು ರಾತ್ರಿ 1 ಗಂಟೆ ರಾತ್ರಿಯವರೆಗೂ ಬೇಕಾದರೂ ಕುಳಿತುಕೊಳ್ಳುತ್ತೇವೆ ನಿರ್ಣಯವನ್ನು ಮಾಡಿ ನನ್ನದೇನೂ ಅಭ್ಯಂತರವಿಲ್ಲ ತಾವು ಈ ಸದನದಲ್ಲಿ ಒಂದು ಚರ್ಚೆ ಆರಂಭವಾಗಲಿ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೇಳುತ್ತಿದ್ದೇನೆ

ಶ್ರೀ ಎಂ ಪಿ ಪ್ರಕಾಶ್. ಅದು ನಮ್ಮ ಕಾರ್ಯಪಟ್ಟಿಯಲ್ಲಿ ಇಲ್ಲ

ಶ್ರೀ ವಾಟಾಳ್ ನಾಗರಾಜ್ ಆಯಿತು ಸ್ವಾಮಿ ನಾಳೆಗೆ ಮುಂದುವರಿಸಿ

ಶ್ರೀ ಎಂ ಪಿ ಪ್ರಕಾಶ್: ಅದನ್ನು ಬಿಎಸಿ ನಿರ್ಣಯ ಮಾಡಬೇಕಾಗುತ್ತದೆ

ಶ್ರೀ ವಾಟಾಳ್ ನಾಗರಾಜ್ ಈಗ ಕರೆಯಿರಿ ತಾವು ಸಭೆ ಕರೆದರೆ ನಾವೆಲ್ಲ ಬರುತ್ತೇವೆ ನಿಮಗೆ ಸಂಪೂರ್ಣ ಬೆಂಬಲವನ್ನು ಕೊಡುತ್ತೇವೆ ನಾಳೆ ಒಂದು ದಿವಸ ನಡೆಯಲಿ ಸಂಪೂರ್ಣವಾಗಿ ಕಾವೇರಿ ಬಗ್ಗೆ ಚರ್ಚೆಯನ್ನು ಮಾಡೋಣ

ಅಧ್ಯಕ್ಷರು ಮಾನ್ಯ ನಾಗರಾಜ್ ಅವರೇ, ಅವರು ಸರ್ಕಾರದ ವತಿಯಿಂದ ಉತ್ತರವನ್ನು ಕೊಟ್ಟಿದ್ದಾರೆ ಅದನ್ನು ಮತ್ತೆ ಮತ್ತೆ ಹೇಳಿದರೆ ಏನಾಗಿದೆ ನೋಡಿ ಅಲ್ಲಿ ಹಂಪನಗೌಡ ನಾಲ್ಕು ಕೋಟಿ ರೂಪಾಯಿ ನಷ್ಟವಾಗಿರುವ ಬಗ್ಗೆ ಹೇಳುತ್ತಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ಸರ್ಕಾರ ಏಕೆ ಮೌನವಾಗಿದ್ದಾರೆ? ಇದರ ಬಗ್ಗೆ ನಿರ್ಣಯ ಮಾಡುವುದಕ್ಕೆ ಏನಾಗಿದೆ ನನಗೆ ಅರ್ಥವಾಗಿಲ್ಲ ಮಾನ್ಯ ಮುಖ್ಯಮಂತ್ರಿಗಳು ತಾವು ಮೌನಕ್ಕೆ ಶರಣಾಗಿದ್ದೀರಿ ಯಾವುದಾದರೂ ಒಂದನ್ನು ಹೇಳಬೇಡವೇ? ಚರ್ಚೆಯನ್ನು ಏಕೆ ಮಾಡುವುದಿಲ್ಲವೆಂದು ದಯವಿಟ್ಟು ಹೇಳಿ ಚರ್ಚೆಗೆ ಅವಕಾಶ ಕೊಡಿ ಸ್ವಾಮಿ ನಾವೆಲ್ಲ ಬಹಳ ಮಾತನಾಡಬೇಕಾಗಿದೆ ಅದರ ಬಗ್ಗೆ

ಅಧ್ಯಕ್ಷರು ಆಯಿತು ಕುಳಿತುಕೊಳ್ಳಿ ನೋಡೋಣ ಯೋಚನೆ ಮಾಡಿ ಅವರು ಹೇಳುತ್ತಾರೆ

ಶ್ರೀ ವಾಟಾಳ್ ನಾಗರಾಜ್ ನಾವೇನು ಸರ್ಕಾರದ ನಿರ್ಧಾರಕ್ಕೆ ನೀವೇನು ನಿರ್ಧಾರ ತೆಗೆದುಕೊಳ್ಳುತ್ತೀರಿ ಅದಕ್ಕೆ ನಮ್ಮ ಬೆಂಬಲ ಇದೆ ನಿಮ್ಮ ನಿರ್ಧಾರಕ್ಕೆ, ಸರ್ಕಾರ ನಿರ್ಧಾರ ತೆಗೆದುಕೊಳ್ಳುವ ನಿರ್ಣಯಕ್ಕೆ ನಾವು

ಬದ್ಧರಿದ್ದೇವೆ ಇದರಲ್ಲೇನು ಬೇರೆ ಪ್ರಶ್ನೆ ಇಲ್ಲವೇ ಇಲ್ಲ ಇಲ್ಲಿ ನಿಮ್ಮ ಸರ್ಕಾರ ಹಾಗೆ ಮಾಡಿತು, ನಮ್ಮ ಸರ್ಕಾರ ಹಾಗೆ ಮಾಡಿತು ಎನ್ನುವ ಚರ್ಚೆ ಇಲ್ಲವೇ ಇಲ್ಲ ಇದರ ಬಗ್ಗೆ ಮುಂದೆ ಏನಾಗಬೇಕಾಗಿದೆ, ಏನು ಅನ್ಯಾಯ ನಡೆದಿದೆ, ಮತ್ತು ನ್ಯಾಯ ಮಂಡಳಿ ಬಗ್ಗೆ ಇದರ ಬಗ್ಗೆಯೇ ಚರ್ಚೆಯನ್ನು ಮಾಡೋಣ

ಅಧ್ಯಕ್ಷರು: ಮಾನ್ಯ ನಾಗರಾಜ್ ರವರೇ, ಅವರೇನೊ ಯೋಚನೆ ಮಾಡಿ ಹೇಳುತ್ತಾರೆ ತಾವು ದಯಮಾಡಿ ಕುಳಿತುಕೊಳ್ಳಿ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಕಾವೇರಿ ಬಗ್ಗೆ ಚರ್ಚೆ ಮಾಡದೆ ಇಡೀ ರಾಜ್ಯದಲ್ಲಿ ಬೆಂಕಿ ಹತ್ತಿಕೊಂಡಿದೆ ಕನ್ನಡಿಗರು ಮರಣ ಶಾಸನಕ್ಕೆ ಅರ್ಜಿ ಹಾಕಿದ್ದಾರೆ ಇಂಥ ಸಂದರ್ಭದಲ್ಲೂ ಈ ರೀತಿ ಮಾಡಿದರೆ ಹೇಗೆ? ಅದಕ್ಕಾಗಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ನಿಯಮ 69ರ ಮೇರೆಗೆ

ವಿಷಯ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರು ಬೆಳೆದ ಬೆಳೆಯನ್ನು ರಕ್ಷಿಸಲು ಮಾರ್ಚ್ 31ರ ವರೆಗೂ ಭದ್ರ ಜಲಾಶಯದಿಂದ ನೀರು ಬಿಡುವ ಬಗ್ಗೆ

ಅಧ್ಯಕ್ಷರು: ಮಾನ್ಯ ಬಾದರ್ಲಿಯವರೇ, ಬೆಳೆ ನಷ್ಟವಾಗಿರುವ ಬಗ್ಗೆ ಎರಡು ನಿಮಿಷ ಹೇಳಿ

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ತುಂಗಭದ್ರಾ ಅಣೆಕಟ್ಟಿನ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಯ ಹತ್ತು ಲಕ್ಷ ರೈತರಿಗೆ ನೀರಿನ ಬೇಸಿಗೆ ಬೆಳೆಗೆ ನೀರಿನ ಕೊರತೆಯಾಗಿದ್ದು ಈ ವಿಚಾರದಲ್ಲಿ ನಾನು ನಮ್ಮ ಮಾನ್ವಿ ಕ್ಷೇತ್ರದ ಶಾಸಕರಾದ ಮಾನ್ಯ ಭೋಸರಾಜ್ ಅವರು ನಮ್ಮ ಪಕ್ಷದ ಮುಖಂಡರು ಸರ್ಕಾರದ ಗಮನಕ್ಕೆ ತರುವ ಈ ಪ್ರಯತ್ನದಲ್ಲಿ ಇವತ್ತು ನಾವು ಚರ್ಚೆಯನ್ನು ಮಾಡುತ್ತಿದ್ದೇವೆ ತುಂಗಭದ್ರಾ ಎಡದಂಡೆ ನಾಲೆಯ ವ್ಯಾಪ್ತಿಯಲ್ಲಿ ಸುಮಾರು ನಾಲ್ಕರಿಂದ ಐದು ಲಕ್ಷ ಎಕರೆ ಪ್ರದೇಶದಲ್ಲಿ ರೈತರು ಇವತ್ತು ಬೇಸಿಗೆ ಬೆಳೆಯನ್ನು ಹಾಕಿದ್ದಾರೆ ಸುಮಾರು ಮೂರು ನೀರಾವರಿ ಸಲಹಾ ಸಮಿತಿಯ ಸಭೆಗಳನ್ನು ಮಾಡಿ, ಆ ಸಭೆಗಳಲ್ಲಿ ನೀರಿನ ಕೊರತೆಯ ಬಗ್ಗೆ, ತುಂಗಭದ್ರಾ ಎಡದಂಡೆ ನಾಲೆಯ ಆಧುನೀಕರಣದ ಬಗ್ಗೆ ಮತ್ತು ತುಂಗಭದ್ರಾದಲ್ಲಿ ಹೂಳು ತುಂಬಿರುವುದರ ಬಗ್ಗೆ ಅನೇಕ ವಿಷಯಗಳನ್ನು ಆ ಭಾಗದ ಸಚಿವರು,